JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಚಿತ್ರದುರ್ಗ ಬಯಲುಸೀಮೆ ಪರಿಸರದ ಚರಗ ಸಂಸ್ಕೃತಿಯ ಲೋಕದೃಷ್ಟಿ

ಡಾ.ಚಿತ್ತಯ್ಯ ಕೆ
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಸರ್ಕಾರಿ ಕಲಾ ಕಾಲೇಜು ಸ್ವಾಯತ್ತ
ಚಿತ್ರದುರ್ಗ –577501
ಈ–ಮೇಲ್ :Chisvr7clk@gmail.com

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮುದಾಯವೂ ತಮ್ಮದೇ ಆದ ಸಂಸ್ಕೃತಿ, ರೂಢಿ, ಸಂಪ್ರದಾಯ ಮತ್ತು ಅಚರಣೆಗಳನ್ನು ಕಾಪಿಟ್ಟುಕೊಂಡು ಬಂದಿದೆ. ಆಧುನಿಕತೆಯ ಪ್ರಭಾವದಿಂದ ಹಬ್ಬ–ಹರಿದಿನ, ಜಾತ್ರೆ, ಉತ್ಸವ ಮುಂತಾದ ಜಾನಪದೀಯ ಆಚರಣೆಗಳ ಹಿಂದಿನ ಪಾರಂಪರಿಕ ಜ್ಞಾನಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ಅವೆಲ್ಲವೂ ಮೂಢನಂಬಿಕೆಯೆಂದು ಸಾರಸಗಟಾಗಿ ತೀರಸ್ಕಾರ ಮಾಡುವ ಆ ಆಚರಣೆಗಳಲ್ಲಿ ಇರುವ ಉತ್ತಮ ಅಂಶಗಳಿಂದ ನಮ್ಮ ಸಂಸ್ಕೃತಿಯ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಯತ್ನ ಮಾಡಬೇಕಿದೆ. ಜನಪದರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿರುವ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಜನಪದರು ಆಚರಿಸುವ ಆಚರಣೆಯನ್ನು ಸೂಕ್ಷ್ಮವಾಗಿ ಗ್ರಹಿಸುವ ಮೂಲಕ ಪಾರಂಪರಿಕ ಜ್ಞಾನವನ್ನು ಎತ್ತಿ ಹಿಡಿಯಬೇಕಾಗಿದೆ. ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ಬೇಟೆ, ಪಶುಪಾಲನೆ, ಕೃಷಿ ಮಾನವನ ಬದುಕಿಗೆ ಮಹತ್ತರವಾದ ತಿರುವು ನೀಡಿದವುಗಳಾಗಿವೆ. ಆದಿಮ ಕಾಲದಲ್ಲಿ ಪುರುಷನು ಬೇಟೆಯಾಡಿದರೆ, ಮಹಿಳೆ ಕೈ ಕೃಷಿ ಮಾಡುತ್ತಾ ದೇಹಕ್ಕೆ ಹೊಂದಿಕೊಳ್ಳುವ ಕಂದ ಮೂಲಗಳನ್ನು ಯಾವುದೆಂದು ಕಂಡುಕೊಂಡ ಫಲವಾಗಿ ಆದಿಮ ಕೃಷಿಕಗಳೆಂದು ಕರೆಯಲಾಗಿದೆ. ಇತಿಹಾಸದಲ್ಲಿ ಇದಕ್ಕೆ ಹಲವು ಕುರುಹುಗಳು ದೊರೆಯುತ್ತವೆ. ಹೀಗಾಗಿ ಮಹಿಳೆಯನ್ನು ಪ್ರಪ್ರಥಮ ಕೃಷಿಕಳೆಂದು ಕರೆಯಲಾಗಿದೆ. ಕಾಲಾನಾಂತರದಲ್ಲಿ ಅದು ಪುರುಷನ ಸ್ವಾಧೀನವಾಗಿರುವುದು ಕಂಡುಬರುತ್ತದೆ.

ಹೀಗೆ ಜನಪದರ ಜೀವನಾಡಿಯಾಗಿರುವ ಕೃಷಿಗೆ ಸಂಬಂಧಿಸಿದಂತೆ ಹಲವಾರು ಆಚರಣೆಗಳನ್ನು ಕೃಷಿಯೊಂದಿಗೆ ತಳುಕು ಹಾಕಿಕೊಂಡಿವೆ. ಇಂತಹ ಆಚರಣೆಗಳಲ್ಲಿ ಕೃಷಿ ಚರಗ ಆಚರಣೆಯು ಒಂದಾಗಿದೆ. ಈ ಕೃಷಿ ಚರಗ ಆಚರಣೆಗಳು ಕರ್ನಾಟಕದ ಉದ್ದಗಲಕ್ಕೂ ಆಚರಣೆಗೊಳ್ಳುತ್ತಿರುವುದು ಗಮನಾರ್ಹವಾಗಿದೆ. ಚರಗ ಎಂದರೇನು? ಎನ್ನುವುದಕ್ಕೆ ವಿವಿಧ ಶಬ್ದಕೋಶ ಮತ್ತು ವಿಶ್ವಕೋಶಗಳಲ್ಲಿ ಉಲ್ಲೇಖಗೊಂಡಂತೆ ಜೀವಿ ಕನ್ನಡ ನಿಘಂಟಿನಲ್ಲಿ ಚರಗ (ನಾಮಪದ) ಹೊಲಗದ್ದೆಗಳಲ್ಲಿ ಪೈರು ಬೆಳೆದಾಗ ರೈತರು ಭೂಮಿ ತಾಯಿಗೆ ನೈವೇದ್ಯವೆಂದು ಕ್ಷೇತ್ರದ ತುಂಬಾ ಎರಚುವ ಆಹಾರ ಪದಾರ್ಥ ಎಂದು ಹೇಳಿದರೆ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಚರಗ ಎಂದರೆ ಹೊಲಗದ್ದೆಗಳಲ್ಲಿ ಪೈರು ಬೆಳೆದಾಗ ಭೂಮಿ ತಾಯಿಗೆ ನೈವೇದ್ಯವೆಂದು ಕ್ಷೇತ್ರದ ತುಂಬಾ ಚೆಲ್ಲುವ ಆಹಾರ ಪದಾರ್ಥವೆಂದು ಉಲ್ಲೇಖವಿದೆ. ಜಿ.ವಿ.ನಾರಾಯಣ ಅವರ 'ಪ್ರಜಾವಾಣಿ ಪದಸಂಪದ'ದಲ್ಲಿ ಚರಗ ಆಚರಣೆ ನಡೆಸಿದ ಬಳಿಕ ಹೊಲಗದ್ದೆಗಳಲ್ಲಿ ಅನ್ನ ಇಲ್ಲವೆ ಬೇರೆ ಆಹಾರ (ಮಾಂಸವೂ ಸೇರಿದಂತೆ) ಚೆಲ್ಲುವ ಕ್ರಮಕ್ಕೆ ಚರಗ, ಚರುಗ, ಸರುಗ ಎಂದು ಪ್ರಾದೇಶಿಕವಾಗಿ ಕರೆಯುತ್ತಾರೆ ಎಂದು ತಿಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಷಯ ವಿಶ್ವಕೋಶ ಜಾನಪದ'ದಲ್ಲಿ 'ಚೆರು' ಹಾಕುವುದು. ಕೃಷಿ ಸಂಬಂಧದಲ್ಲಿ ಮಾಡುವ ಒಂದು ಆಚರಣೆ, ಬೆಳೆಯನ್ನು ಕೊಟ್ಟ ಭೂಮಿ ತಾಯಿಗೆ ನಮನವನ್ನು ಅರ್ಪಿಸುವ ಸಂದರ್ಭವನ್ನು 'ಚೆರು' ಹಾಕೋದು, ಚರಗ ಚೆಲ್ಲುವುದು ಮುಂತಾದ ಹೆಸರಿನಿಂದಲೂ ಕರೆಯುತ್ತಾರೆ ಎನ್ನುವ ಪ್ರಸ್ತಾಪವೂ ಇದೆ. 'ಚರಗ' ಶಬ್ದವು 'ಚೆರಪು' ಪದದಿಂದ ಬಂದಿದೆ. ಚೆರಪು ಎಂದರೆ ಎರಚುವುದು, ಚೆಲ್ಲುವುದು ಎಂದು ಅರ್ಥ. ವಿದ್ವಾಂಸರು ಮತ್ತು ವಕ್ತೃಗಳ ಮಾಹಿತಿಯನ್ನು ಆಧರಿಸಿ, ಒಟ್ಟಾರೆಯಾಗಿ ಚರಗ ಎಂದರೇನು ಎಂದು ಹೇಳುವುದಾದರೆ ಪಶುಪಾಲಕರು ತಮ್ಮ ಪಶುಗಳು ಕ್ಷೇಮದಿಂದ ಇರಲೆಂಬ ಉದ್ದೇಶದಿಂದ ಮತ್ತು ಊರಿನ ಜನಗಳು, ಊರು ಕ್ಷೇಮ

ಮತ್ತು ಶಾಂತಿಯಿಂದ ಇರಲೆಂಬ ಉದ್ದೇಶದಿಂದ, ಕೃಷಿಕ ಸಮುದಾಯದವರು ಬೆಳೆಗಳು ಸಮೃದ್ಧವಾಗಿ ಬರಲೆನ್ನುವ ಉದ್ದೇಶದಿಂದ ಅನ್ನ ಅಥವಾ ಪ್ರಾಣಿಯ ಕರಸು ಮತ್ತು ರಕ್ತವನ್ನು ಚೆಲ್ಲುವ ಕ್ರಮಕ್ಕೆ 'ಚರಗ' ಎಂದು ಕರೆಯುತ್ತಾರೆ.

***ಕೃಷಿ ಚರಗ ಆಚರಣೆ :*** ಜನಪದರ ಬದುಕಿಗೆ ಕೃಷಿಯೇ ಆಸರೆ. ಅವರ ನಂಬುಗೆ, ಪದ್ಧತಿ, ಆಚಾರ-ವಿಚಾರ, ಆಚರಣೆಗಳನ್ನು ಜೀವಂತವಾಗಿಡಲು ನೆರವಾಗಿದೆ. ಬಹುಪಾಲು ಜನರ ಬದುಕು ಅವಲಂಬಿತವಾದದ್ದೇ ಕೃಷಿಯ ಮೇಲೆ. ಗ್ರಾಮೀಣ ಜನತೆಯ ಸಂಪ್ರದಾಯ, ಆಚರಣೆ, ಜಾತಿ ಪದ್ದತಿ, ಉದ್ಯೋಗ ವ್ಯವಸ್ಥೆ ಒಂದಕ್ಕೊಂದು ತಳುಕು ಹಾಕಿಕೊಂಡು ನಿಂತಿವೆ ಎನ್ನಬಹುದು.

ಚಿತ್ರದುರ್ಗ ಜಿಲ್ಲೆ ಬಯಲುಸೀಮೆ ಪರಿಸರದಲ್ಲಿ ಮಾರಿ (ಮಾರಮ್ಮನ) ಹಬ್ಬ ಮತ್ತು ದಸರ ಯೂಗಾದಿ ಮುಂತಾದ ಹಬ್ಬಗಳಲ್ಲಿ ಚರಗ ಚೆಲ್ಲುವ ಸಂಪ್ರದಾಯಗಳು ಇಂದಿಗೂ ಕಂಡು ಬರುತ್ತವೆ. ಇಲ್ಲಿ ಸಸ್ಯಾಹಾರ ಚರಗ ಮತ್ತು ಮಾಂಸಾಹಾರ ಚರಗ ಎರಡೂ ರೂಪಗಳಲ್ಲಿ ಕಂಡುಬರುತ್ತವೆ. ಕಾಡುಗೊಲ್ಲ ಮತ್ತು ಮ್ಯಾಸಬೇಡ ಇನ್ನಿತರ ಬುಡಕಟ್ಟು ಸಮುದಾಯಕ್ಕೆ ಸೇರಿದ ರೈತ ಸಮುದಾಯ ಮಾರಿ ಅಥವಾ ಮಾರಮ್ಮನ ಜಾತ್ರೆ, ಉತ್ಸವದಲ್ಲಿ ಕುರಿ, ಕೋ:ಳಿ ಹಾಗೂ ಕೋಣ ಬಲಿಕೊಟ್ಟು ಚರಗ ಚೆಲ್ಲುತ್ತಾರೆ.

ಕೃಷಿ ಸಮುದಾಯದಲ್ಲಿ ಗಂಡು ದೇವರಿಗಿಂತ ಹೆಣ್ಣು ದೇವರಿಗೆ, ಅಮಾವಾಸ್ಯೆಗಿಂತ ಹುಣ್ಣಿಮೆಗೆ, ಹಗಲಿಗಿಂತ ರಾತ್ರಿಗೆ ಹೆಚ್ಚಿನ ಮಹತ್ವ ಇರುತ್ತದೆ. ಈಗಲೂ ಕೂಡ ಗ್ರಾಮೀಣ ಭಾಗದಲ್ಲಿ ಕತ್ತಲಲ್ಲಿಯೇ ಚರಗ ಚೆಲ್ಲುವುದು ವಿಶೇಷವಾಗಿರುತ್ತದೆ. ಹೊಲದ ದೇವರೆಂದು ಹೊಲದಲ್ಲಿರುವ ಬೇವಿನ ಮರಕ್ಕೆ ಕುರಿಯನ್ನು ಬಲಿ ನೀಡುತ್ತಾರೆ. ಮತ್ತು ಅನ್ನ, ನೀರು, ಎಲೆ, ಅಡಿಕೆ, ಕುಂಕುಮ, ಬೇವಿನ ಎಲೆ ಮತ್ತು ಕಕ್ಕೆ ಗಿಡದ ಎಲೆಗಳನ್ನು ಹೊಲದಲ್ಲಿರುವ ಬೇವಿನ ಮರಕ್ಕೆ ನೈವೇದ್ಯವೆಂದು ಅರ್ಪಿಸಿ, ನಂತರ ಕುರಿಯ ರಕ್ತ, ಕರಸನ್ನು ಮತ್ತು ಎಡೆ ಅರ್ಪಿಸಿದ ಎಲ್ಲಾ ಪದಾರ್ಥಗಳನ್ನು ನೀರಿನಲ್ಲಿ ಕಲಿಸಿಕೊಂಡು ಒಬ್ಬ ಮುಂದೆ ಮುಂದೆ ನೀರನ್ನು ಎರಚುತ್ತಾ ಸಾಗಿದರೆ ಮತ್ತೊಬ್ಬ ರಕ್ತ, ಕರಸು ನೈವೇದ್ಯ ಪದಾರ್ಥಗಳನ್ನು ಕಲಿಸಿದ ಪುಟ್ಟಿಯನ್ನು ಹಿಡಿದುಕೊಂಡು 'ಹೋಲಿಗ್ಯ ಹೋಲಿಗ್ಯ' ಎಂದು ಹೊಲದ ಸುತ್ತಲೂ ಚರಗ ಚೆಲ್ಲುತ್ತಾರೆ. ಇನ್ನೂ ಕೆಲವು ಗ್ರಾಮಗಳಲ್ಲಿ ನಾನಾ ತರಹದ ಸೊಪ್ಪುಗಳನ್ನು ಬೇಯಿಸಿಕೊಂಡು ಈ ರೀತಿಯಾಗಿ ಚರಗ ಚೆಲ್ಲುವುದು ಕಂಡುಬರುತ್ತದೆ. ಮಾರಿ ಹಬ್ಬಗಳ ಸಂದರ್ಭದಲ್ಲೂ ಮಾರಿ ದೇವತೆಗೆ ಗರ್ಭಧರಿಸಿದ ಕುರಿ ಮತ್ತು ಊರಿನ ಜನಗಳು ತಮ್ಮ ತಮ್ಮ ಕುರಿಗಳನ್ನು ಬಲಿ ನೀಡಿದ ಬಳಿಕ ಮಾರಿ ದೇವತೆಯ ಜೋಳದ ಅಂಬಲಿಯನ್ನು ಪ್ರಸಾದ ರೂಪದಲ್ಲಿ ಪಡೆದು ಮಾರಿ ದೇವತೆಗೆ ಅರ್ಪಿಸಿದ ಬೇವಿನ ಎಲೆಯನ್ನು ಕುಂಕುಮ ಮತ್ತು ಎಳ್ನೀರು ಸ್ವೀಕರಿಸಿಕೊಂಡು ಯಾರು ಮೊದಲಿಗೆ ತಮ್ಮ ಹೊಲಕ್ಕೆ ಹೋಗಿ ಚರಗ ರೂಪದಲ್ಲಿ ತೀರ್ಥ ಚೆಲ್ಲುತ್ತಾರೋ ಅವರ ಹೊಲದಲ್ಲಿ ಬೆಳೆ ಹೆಚ್ಚು ಹುಲುಸಾಗಿ ಬರುತ್ತದೆಂದು ನಂಬಿಕೆಯಿಂದ ಓಡೋಡಿ ಹೋಗಿ ಚೆಲ್ಲುವುದು ಗಮನಾರ್ಹವಾಗಿದೆ.

ಸಸ್ಯಾಹಾರಿ ರೈತ ಸಮುದಾಯಗಳು ಕಾರ್ತಿಕೋತ್ಸವ, ಕಾರಹಬ್ಬ, ಹೋಳಿಗೆಯಮ್ಮ, ದೇವರು, ಜಾತ್ರೆ, ಶಿವರಾತ್ರಿ ಮುಂತಾದ ಹಬ್ಬಗಳಲ್ಲಿ ತಮ್ಮ ತಮ್ಮ ಹೊಲಗಳಿಗೆ ನಾನಾ ಪದಾರ್ಥಗಳನ್ನು ಕಟ್ಟಿಕೊಂಡು ಹೋಗಿ ಬನ್ನಿಯ ಮರಕ್ಕೆ ಪೂಜೆ ಮಾಡಿ ಎಡೆ ಅರ್ಪಿಸಿ ನಂತರ ತಮ್ಮ ತಮ್ಮ ಹೊಲಗಳಿಗೆ ಎಲ್ಲಾ ಪದಾರ್ಥಗಳನ್ನು ಕಲಿಸಿಕೊಂಡು ಚರಗ ಚೆಲ್ಲುವ ಪದ್ಧತಿ ಇದೆ.

**ಮುಸುರೆ ಚೆಲ್ಲುವ ಆಚರಣೆ :** ಚಿತ್ರದುರ್ಗ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಪ್ರಚಲಿತವಿರುವ ವಿಶಿಷ್ಟ ಆಚರಣೆಯೇ 'ಮುಸುರೆ ಚೆಲ್ಲುವು'ದು. ಊರು, ಜನ-ಜಾನುವಾರುಗಳ ಮತ್ತು ಕೃಷಿ ಬೆಳೆಗಳ ಸಮೃದ್ಧಿ ಹಾಗೂ ರಕ್ಷಣೆಗಾಗಿ ಈ ಆಚರಣೆಯನ್ನು ಆಚರಿಸುತ್ತಿರುವುದು ಕಂಡುಬರುತ್ತದೆ. ಈ ಆಚರಣೆಯ ಮುಖ್ಯ ಉದ್ದೇಶ ದನ-ಕರು ಹಾಗೂ ಕೃಷಿ ಬೆಳೆಗಳಿಗೆ ಯಾವುದೇ ರೀತಿ ರೋಗ-ರುಜಿನಗಳು ಹಾಗೂ ದೃಷ್ಟಿ ತಾಗದಿರಲೆಂಬ ಆಶಯವನ್ನು ಹೊಂದಿದೆ. ಅಡುಗೆ ಮಾಡಿದ ಅನ್ನವನ್ನು ಯಾರೂ ಬಳಸದ ಮುನ್ನ ದೇವರ ಎಡೆಗೆಂದು ತೆಗೆದಿಟ್ಟು, ದೇವರಿಗೆ ಎಡೆ ಮಾಡಿದ ನಂತರ ಆ ಎಡೆಯಲ್ಲಿನ ಸ್ವಲ್ಪ ಭಾಗವನ್ನು ನೀರಿನಲ್ಲಿ ಕಲೆಸಿ ದನ-ಕರು, ಕುರಿ-ಮೇಕೆ, ಸಮೃದ್ಧಿಯಾಗಿ ಬೆಳೆದು ನಿಂತ ಹೊಲಗಳಿಗೆ ಚೆಲ್ಲುವ ಸಂಪ್ರದಾಯ ಇರುವುದು ಕಂಡುಬರುತ್ತದೆ. ಇಂತಹ ಆಚರಣೆಗಳ ಹಿಂದೆ ತಮಗೊದಗಿದ, ಒದಗುವ ಅಪಾಯಗಳನ್ನು ತಪ್ಪಿಸಿಕೊಳ್ಳುವ ಬಹು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಮುಸುರೆ' ಚೆಲ್ಲುವ ಆಚರಣೆಯು ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ, ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಂದು ನಡೆಯುತ್ತದೆ. ಇದರಲ್ಲಿ ಊರಿನ ಗೊಂಚಿಕಾರ, ಗೌಡ, ಪಟೇಲರು, ಹಟ್ಟಿಯ ಯಜಮಾನರು ಈ ಕಾರ್ಯದಲ್ಲಿ ತೊಡಗುತ್ತಾರೆ. ಮುಸರೆ ಚೆಲ್ಲುವ ಕಾರ್ಯಕ್ಕೆ ಬಳಸುವ ಮಣ್ಣಿನ ಪಾತ್ರೆಯನ್ನು ಗೌಡರ ಮನೆಯಲ್ಲಿ

ಇಟ್ಟಿರುತ್ತಾರೆ. ಇದನ್ನು ಮುಸರೆ ಚೆಲ್ಲುವ ಸಮಯದಲ್ಲಿ ಊರಿನ ಗೌಡರ ಮನೆಯಿಂದ ತಂದು, ಗ್ರಾಮದ ಪ್ರತಿಯೊಂದು ಮನೆಯಿಂದ ಅನ್ನ, ಮುದ್ದೆ, ರಾಗಿಹಿಟ್ಟು, ಜೋಳದ ಹಿಟ್ಟು ಸಂಗ್ರಹಿಸಿಕೊಂಡು, ಊರಿನ ಮಧ್ಯಭಾಗದಲ್ಲಿರುವ ಮಾರಿ ದೇವಸ್ಥಾನದಲ್ಲಿ ಇಡುತ್ತಾರೆ. ಹೀಗೆ ಸಂಗ್ರಹಸಿದ ಪದಾರ್ಥಗಳಿಗೆ ಕುಂಕುಮ, ವಿಭೂತಿ, ಊದಿನ ಕಡ್ಡಿಯಿಂದ ಪೂಜೆ ಮಾಡಿ, ಕಾಯಿ ಒಡೆಯುತ್ತಾರೆ. ಹೀಗೆ ಪ್ರತಿ ಮನೆಯಿಂದ ತಂದ ಮುಸರೆ ಪದಾರ್ಥವನ್ನು ಎಡೆ ಮಾಡಿ ಅರ್ಪಿಸುತ್ತಾರೆ. ಎಡೆ ಅರ್ಪಿಸಿದ ಪದಾರ್ಥ, ಕುಂಕುಮವನ್ನು ಮತ್ತು ಬೇವಿನ ಎಲೆ ಇವುಗಳನ್ನು ಮಣ್ಣಿನ ಪಾತ್ರೆಯಲ್ಲಿ ಕಲೆಸಿ ಸಿದ್ದಪಡಿಸಿಕೊಳ್ಳುತ್ತಾರೆ. ಈ ಕ್ರಿಯೆಯಲ್ಲಿ ಮುಖ್ಯವಾಗಿ ಮೂರು ಜನ ಭಾಗವಹಿಸುತ್ತಾರೆ. ಒಬ್ಬ ಮುಂದೆ ಮುಸರೆ ಚೆಲ್ಲುವ ಸಂದರ್ಭದಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿಯರು ಹೊರಗೆ ಬರಬೇಡಿ ಎಂದು ಸಾರುತ್ತಾ ಹೋಗುತ್ತಿದ್ದರೆ, ಅವನ ಹಿಂದೆ ಮತ್ತೊಬ್ಬ ನೀರನ್ನು ಚಿಮುಕಿಸಿಕೊಂಡು ಸಾಗುತ್ತಾನೆ. ಅವನ ಹಿಂದೆ ಮಗದೊಬ್ಬ ಕಂಬಳಿಯನ್ನು ಒದ್ದುಕೊಂಡು ಮಣ್ಣಿನ ಮುಸರೆ ಪಾತ್ರೆಯನ್ನು ಹಿಡಿದುಕೊಂಡು, ಬೇವಿನ ಸೊಪ್ಪನ್ನು ಪಾತ್ರೆಯಲ್ಲಿ ಅದ್ದಿ ತೆಗೆದು ಮುಸರೆ ಚೆಲ್ಲುತ್ತಾನೆ. ಹೀಗೆ ಚೆಲ್ಲುವಾಗ ಎಡದಿಂದ ಬಲಕ್ಕೆ ತಿರುಗುತ್ತಾ ಊರ ಹೊರಗಡೆ ಸಾಗುತ್ತಾರೆ. ಮುಸರೆ ಚೆಲ್ಲುವ ಉದ್ದೇಶವನ್ನು ಗಮನಿಸಿದಾಗ ಜನ–ದನ–ಕುರಿಗಳಿಗೆ ಯಾವುದೇ ರೋಗ ಬಾರದಿರಲಿ ಎಂಬ ಉದ್ದೇಶವಾಗಿರುತ್ತದೆ.

ಕೃಷಿ ಕುಟುಂಬಗಳು ದಿನಾಲು ಸಾಯಂಕಾಲ ಅಡುಗೆ ಮಾಡಿದ ನಂತರ ಮನೆಯ ಒಳಗೆ–ಹೊರಗೆ ಮುಸರೆ ಚೆಲ್ಲುವುದರ ಜೊತೆಗೆ ತಾವು ಸಾಕಿದ ಜಾನುವಾರುಗಳಿಗೂ ಪ್ರತಿದಿನ ಮುಸರೆ ಚೆಲ್ಲುವ ಪದ್ಧತಿ ರೂಢಿಯಲ್ಲಿದೆ. ಇಲ್ಲಿ ರಾವು(ಬೇರೆಯವರ ದೃಷ್ಟಿ ತಾಗದಿರಲಿ)ನಿವಾರಣೆಯಾಗಲಿ ಎಂಬ ಆಶಯವೂ ಇದೆ. ಮಳೆಗಾಲದ ಸಂದರ್ಭದಲ್ಲಿ ಸಿಡಿಲು–ಗುಡುಗುಗಳು ಆರ್ಭಟಿಸಿದಾಗ, ಮನೆಗಳಿಗೆ ಬೆಂಕಿ ಬಿದ್ದಾಗ ಮುಸರೆ ಚೆಲ್ಲುತ್ತಾರೆ. ಈ ಮುಸರೆ ಚೆಲ್ಲುವುದರ ಮುಖ್ಯ ಉದ್ದೇಶವೇನು ಎಂದು ಪ್ರಶ್ನಿಸಿದಾಗ 'ಶಾಂತಿಗಾಗಿ' ಎಂಬ ಮಾಹಿತಿಯನ್ನು ವಕ್ತೃಗಳು ವ್ಯಕ್ತಪಡಿಸುತ್ತಾರೆ.

ಚರಗ ಚೆಲ್ಲುವ ಪ್ರಕ್ರಿಯೆಯ ಹಿಂದೆ ಅನುಭವ ಜನ್ಯ ಪಾರಂಪರಿಕಜ್ಞಾನ ಇರುವುದನ್ನು ಗುರುತಿಸಬಹುದಾಗಿದೆ. ಕೃಷಿಕರು ತಮ್ಮ ಬೆಳೆಗಳಿಗೆ ಬರುವ ರೋಗ–ರುಜಿನಗಳ ಪರಿಹಾರಾರ್ಥವಾಗಿ, ಚರಗ ಚೆಲ್ಲುವ ಆಚರಣೆಯು ಬೆಳೆದು ಬಂದಿದೆ. ಬೆಳೆ ರಾವು ಇದ್ದಂತೆ. ಹೊಲಗದ್ದೆ, ತೋಟಗಳಲ್ಲಿ ರಾತ್ರಿ ಹಗಲು ಓಡಾಡುತ್ತಿರುವವರಿಗೆ ಇದರಿಂದ ಯಾವುದೇ ತೊಂದರೆ ಆಗದಿರಲಿ ಎಂದು ಚರಗ ಹಾಕುತ್ತಾರೆ. ರೈತ ತಾನು ಬೆಳೆದಿದ್ದನ್ನು ತಾನು ಮಾತ್ರ ಉಪಯೋಗಿಸದೇ ಭೂತಾಯಿಗೂ ಸಮರ್ಪಿಸಿ, ಆ ಮೂಲಕ ಪ್ರಾಣಿ–ಪಕ್ಷಿಗಳು ಅದನ್ನು ತಿಂದು ಸಂತೋಷಪಡಲಿ ಎಂಬ ಹಂಚಿ ತಿನ್ನುವ ಮನೋಭಾವ ಚರಗ ಆಚರಣೆಯ ಮುಖ್ಯ ಆಶಯವಾಗಿದೆ. ನೆಲವನ್ನು ಉತ್ತಿ, ಬಿತ್ತಿ, ಗೊಬ್ಬರ ಹಾಕಿ ಆರೈಕೆ ಮಾಡಿದ ಬೆಳೆ ಮೈತುಂಬಿಕೊಂಡಾಗ ರೋಗ ನಿವಾರಣೆಯಾಗಿ, ಬೆಳೆ ಹುಲುಸಾಗಿ ಬರಲಿ ಎಂದು ಭೂಮಾತೆ ಪೂಜೆ ಮಾಡುವುದೇ ಚರಗ. ತೀರ್ಥ, ಮುಸುರೆ ಚೆಲ್ಲುವುದು, ನೀರು ಹಾಕಿಸುವುದು ಚರಗ ಆಚರಣೆಯ ಇನ್ನೊಂದು ಆಯಾಮ. ಮತ್ತು ಮಂಗಳವಾರ, ಶುಕ್ರವಾರ ಮತ್ತು ಭಾನುವಾರದಂದು ಬೆಳೆಗಳಿಗೆ ಮುಸುರೆ ಚೆಲ್ಲುವುದು ಬಯಲುಸೀಮೆ ಪರಿಸರದಲ್ಲಿ ಕಂಡುಬರುತ್ತದೆ. ಚರಗ ಆಚರಣೆಯು ಮತ್ತು ಮುಸುರೆ, ತೀರ್ಥ ಚೆಲ್ಲುವುದು ಅಮಾವಾಸ್ಯೆ ಮತ್ತು ಹುಣ್ಣಿಮೆಗಳಂದು ಹಾಗೂ ಮಾರಿ ಜಾತ್ರೆಗಳಲ್ಲಿ ಚೆಲ್ಲುವ ಬೇವಿನ ಎಲೆ, ಕುಂಕುಮ, ವಿಭೂತಿಗೆ ಮೊಸರು ಕಲೆಸಿ ಚೆಲ್ಲುವ ಸಂಪ್ರದಾಯವೂ ಕೂಡ, ಊರಿನ ಜನರ ಕ್ಷೇಮ, ಸಮೃದ್ಧಿ ಮತ್ತು ಶಾಂತಿಯನ್ನು ಕಾಪಾಡುವ ಆಶಯವನ್ನು ಹೊಂದಿದೆ. ಸಾಮಾನ್ಯವಾಗಿ ಪಶುಪಾಲಕರು ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಂದು ವಿಶೇಷವಾಗಿ ಚರಗ, ಮುಸುರೆ ಚೆಲ್ಲುವಂತಹ ಆಚರಣೆಗಳನ್ನು ಆಚರಿಸುತ್ತಾರೆ. ಜೊತೆಗೆ ದಿನನಿತ್ಯ ಬೆಳಿಗ್ಗೆ ಅಥವಾ ಸಾಯಂಕಾಲ ಮುಸುರೆ ಚೆಲ್ಲುವುದನ್ನು ರೂಢಿಸಿಕೊಂಡು ಬಂದಿದ್ದಾರೆ ಮತ್ತು ಈಗಲೂ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹೀಗೆ ಮಾಡುವುದರಿಂದ ಪಶುಗಳ ಕ್ಷೇಮ ಮತ್ತು ಸಂತಾನ ಅಭಿವೃದ್ಧಿಯಾಗುತ್ತದೆ ಎನ್ನುವ ನಂಬಿಕೆ ಅವರಲ್ಲಿದೆ.

ಈ ಕೃಷಿ ಚರಗ ಆಚರಣೆಯಲ್ಲಿ ಫಲ ಕೊಡುವ ಭೂಮಿ ತಾಯಿಗೂ ಮತ್ತು ಮಕ್ಕಳ ಹೆರುವ ಸ್ತ್ರೀಯರಿಗೂ ಅವಿನಾಭಾವ ಸಂಬಂಧವನ್ನು ಕಲ್ಪಿಸಲಾಗಿದೆ. ಗರ್ಭಸಂಬಂಧಿ ಲಕ್ಷಣವಾಗಿರುವ ಋತು ಸ್ರಾವದಲ್ಲಿ ಮತ್ತು ಹೆರಿಗೆಯಲ್ಲಿ ಕಾಣಿಸುವ ರಕ್ತ ಫಲವಂತಿಕೆಯ ಪ್ರತೀಕವಾಗಿ, ರಕ್ತವನ್ನು ಬೀಜದೊಂದಿಗೆ ಬೆರೆಸಿ ಬಿತ್ತಿದರೆ ಸಮೃದ್ಧಿ ಬೆಳೆ ಸಾಧ್ಯವೆಂದು ನಂಬಿರುತ್ತಾರೆ. ಶಕ್ತಿ ದೈವಿಗಳಿಗೆ ಬಲಿ ನೀಡಿದ ಪ್ರಾಣಿಯ ರಕ್ತದ ಜೊತೆ ಬೀಜ ಬೆರಸಿ ಹೊಲಗದ್ದೆಗಳಲ್ಲಿ ಬಿತ್ತಿದರೆ ಸಮೃದ್ಧಿ ಬೆಳೆ ಬರುತ್ತದೆ ಎಂಬ ನಂಬಿಕೆಯಿಂದ ಮಾಂಸಹಾರಿ ಕೃಷಿ ಚರಗ ಆಚರಣೆಗಳು ಜರುಗುತ್ತವೆ. ಇದೇ ರೀತಿಯಲ್ಲಿ ಸಮೃದ್ಧಿಯ ಸಂಕೇತವಾಗಿ ಸಸ್ಯಹಾರಿ ಕೃಷಿ ಚರಗ ಆಚರಣೆಗಳು ಪ್ರಚಲಿತದಲ್ಲಿವೆ.

ಚಿತ್ರದುರ್ಗ ಜಿಲ್ಲೆಯ ಹಲವು ಗ್ರಾಮದಲ್ಲಿ ದಸರಾ, ದೀಪಾವಳಿ, ಮಾರಿಹಬ್ಬಗಳಲ್ಲಿ ಕೃಷಿ ಚರಗ ಆಚರಣೆಗಳು ಕಂಡುಬರುತ್ತವೆ. ಇಲ್ಲಿ ಸಸ್ಯಹಾರಿ ಕೃಷಿ ಚರಗ ಮತ್ತು ಮಾಂಸಹಾರ ಕೃಷಿ ಚರಗ ರೂಪಗಳಲ್ಲಿ ಚರಗ ಚೆಲ್ಲುವುದು ಕಂಡುಬರುವುದು ಗಮನಾರ್ಹವಾಗಿದೆ. ಅಂದರೆ ರೈತ ಸಮುದಾಯಗಳು ತಮ್ಮ ಆಹಾರ ಪದ್ಧತಿಗಳಿಗೆ ಅನುಗುಣವಾಗಿ ಚರಗ ಚೆಲ್ಲುವುದು ವಿಶೇಷವಾಗಿರುತ್ತದೆ. ಈ ಭಾಗಗಳಲ್ಲಿ ಕಂಡುಬರುವ ಬುಡಕಟ್ಟು ಸಮುದಾಯದವರು ಬಹುಪಾಲು ಮಾಂಸಹಾರಿ ಕೃಷಿ ಚರಗವನ್ನೇ ಆಚರಿಸುತ್ತಾರೆ. ವ್ಯವಸಾಯದ ಪ್ರತಿ ಹಂತದಲ್ಲಿಯೂ ಇಂತಹ ಚರಗ ಆಚರಣೆಗಳ ಮೂಲಕ ಕಾಪಾಡಿಕೊಂಡಿರುತ್ತಾರೆ. ಬಿತ್ತನೆ, ನಾಟಿ, ಕೊಯ್ಲು, ರಾಶಿ ಪೂಜೆ, ಕಣದ ಪೂಜೆ, ಒಕ್ಕಲುತನ ಹೀಗೆ ಎಲ್ಲಾ ಸಂದರ್ಭಗಳಲ್ಲಿ ಕೃಷಿಕರು ತಾವು ನಂಬಿಕೊಂಡ ಭೂಮಿ, ಬೀಜ, ಪೈರು, ಧಾನ್ಯಗಳಲ್ಲಿ ದೈವೀಶಕ್ತಿ ಗುಣವನ್ನು ಕಾಣುತ್ತಾರೆ. ಈ ದೈವಿಕ ಕಲ್ಪನೆಯ ಜೊತೆ ಜೊತೆಗೆ ಕೃಷಿ ಸಂಬಂಧಿಸಿದಂತೆ, ಸಮೃದ್ಧಿಯ ಆಶಯವನ್ನು ಅವರು ಹೊಂದಿರುತ್ತಾರೆ. ತಾವು ಬೆಳೆಯುವ ಬೆಳೆ ಉತ್ತಮ ಫಸಲನ್ನು ಕೊಡಲೆಂಬ ಆಶಯದಿಂದ ಕೃಷಿಕರು ವ್ಯವಸಾಯದ ಪ್ರತಿ ಹಂತದಲ್ಲೂ ಒಂದಿಲ್ಲೊಂದು ಆಚರಣೆಯಲ್ಲಿ ತೊಡಗಿರುತ್ತಾರೆ. ಸಮೃದ್ಧಿ ಆಶಯವುಳ್ಳ ಈ ಬಗೆಯ ಕೃಷಿ ಸಂಬಂಧಿ ಆಚರಣೆಗಳು ಭಾರತದ ಎಲ್ಲಾ ಕೃಷಿಕ ಸಮುದಾಯದಲ್ಲೂ ಪ್ರಚಲಿತವಿದೆಯೆಂದು ಹೇಳಬಹುದು. ಅದರಲ್ಲಿಯೂ ದ್ರಾವಿಡ ಪ್ರದೇಶಗಳಲ್ಲಿ ಇದು ವ್ಯಾಪಕವಾಗಿರುವುದನ್ನು ನಾವು ಕಾಣುತ್ತೇವೆ. ಇಂತಹ ಆಚರಣೆಗಳನ್ನು ಒಟ್ಟು ಕೃಷಿ ಬದುಕಿಗೆ ಸಂಬಂಧಿಸಿದವುಗಳಾದರೂ ಆಯಾ ಪ್ರದೇಶದ ಪ್ರಮುಖ ಆಹಾರ ಬೆಳೆಗಳೊಂದಿಗೆ ವಿಶೇಷ ಸಂಬಂಧವನ್ನು ಹೊಂದಿರುತ್ತವೆ. ಕರ್ನಾಟಕದ ಕರಾವಳಿ ಕರ್ನಾಟಕ, ಕೊಡಗು, ಮಲೆನಾಡುಗಳಲ್ಲಿ ಅಡಿಕೆ, ಬಾಳೆ ಮತ್ತು ಭತ್ತದ ಗದ್ದೆಯೊಂದಿಗೆ ಚರಗ ಆಚರಣೆ ಹೊಂದಿದ್ದರೆ, ಉತ್ತರ ಕರ್ನಾಟಕದ ಭಾಗಗಳಲ್ಲಿ ಜೋಳದೊಂದಿಗೆ ಆಚರಿಸುತ್ತಾರೆ. ಮಧ್ಯ ಕರ್ನಾಟಕದ ಭಾಗಗಳಲ್ಲಿ ರಾಗಿ, ಗದ್ದೆಯೊಂದಿಗೆ ಆಚರಿಸುತ್ತಾರೆ.

**ಪರಾಮರ್ಶನಾ ಗ್ರಂಥಗಳು**

ದೇವಿಪ್ರಸಾದ್ ಚಟ್ಟೋಪಾಧ್ಯಾಯ ಲೋಕಾಯತ, ಜಿ.ರಾಮಕೃಷ್ಣ (ಅನುವಾದ), 2011, ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ., ಬೆಂಗಳೂರು.
ಹಿರೇಮಠ.ಎಸ್.ಎಸ್; ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ, ಜಾತ್ರೆಗಳು(ಭಾಗ–2), 1993, ಸಮತಾ ಪ್ರಕಾಶನ, ಹೊಸಪೇಟೆ.
ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಎರಡನೇ ಮುದ್ರಣ, 2008, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.